# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 119/2022

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಪುರುಷೋತ್ತಮ್ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ರಾಮಕೃಷ್ಣಯ್ಯ | | **15.10.2024** |
| ವಯಸ್ಸು | ಃ **47** ವರ್ಷ | | |
| ವೃತ್ತಿ | ಃ ವ್ಯವಸಾಯ | ಪ್ರಾ.ಸಾ. ಃ | **35** |
| ವಾಸಸ್ಥಳ | ಃ ಕಾಮನಕೆರೆಹುಂಡಿ | ಚಾ.ಸಾ. ಃ | **40** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮೃತ ಶಿವಪ್ರಕಾಶ್ ಇವರ ಪರಿಚಯ ಇದೆ. ಶಿವಪ್ರಕಾಶ್ ಇವರ ಶವ ಪಂಚನಾಮೆ ಕಾಲಕ್ಕೆ ನಾನು ಹಾಜರಿರಲಿಲ್ಲ ಆದರೆ ಶವ ಸಂಸ್ಕಾರದ ಕಾಲಕ್ಕೆ ಹಾಜರಿದ್ದೆ. ನಾನು ಶವ ಪಂಚನಾಮೆ ಕಾಲಕ್ಕೆ ಹಾಜರಿದ್ದು ಹೇಳಿಕೆ ಕೊಟ್ಟಿಲ್ಲ. ಶಿವಪ್ರಕಾಶ್ ಇವರ ವ್ಯವಹಾರಗಳ ಬಗ್ಗೆ ಗೊತ್ತಿಲ್ಲ. ಶಿವಪ್ರಕಾಶ್ ಇವರನ್ನು ಯಾರು ಕೊಲೆ ಮಾಡಿದ್ದಾರೆ ಎಂದು ಗೊತ್ತಿಲ್ಲ. ಶಿವಪ್ರಕಾಶ್ ಇವರು ಬೇರೆ ಯಾರ ಮನೆಗೆ ಹೊಗುತ್ತಿದ್ದರು ಎಂದು ಗೊತ್ತಿಲ್ಲ. ಶಿವಪ್ರಕಾಶ್ ಇವರಿಗೆ ಇಬ್ಬರು ಮಕ್ಕಳು. ಈ ಪ್ರಕರಣದ ಆರೋಪಿತ ಶಿವಪ್ರಕಾಶ್ ಇವರ ಮಗನಿರುತ್ತಾನೆ. ಶವ ಸಂಸ್ಕಾರದ ಕಾಲಕ್ಕೆ ಶಿವಪ್ರಕಾಶ್ ಇವರಿಗೆ ಎಲ್ಲೆಲ್ಲಿ ಗಾಯಗಳಾಗಿತ್ತು ಎಂದು ನಾನು ನೋಡಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ದಿಃ*22.10.2021* ರಂದು ಶಿವಪ್ರಕಾಶ್ ಇವರ ಶವ ತನಿಖೆ ಕಾಲಕ್ಕೆ ನಾನು ಹಾಜರಿದ್ದೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ಈ ದಿನ ಮೈಸೂರು --------- ತಿಳಿಯಬಯಸುತ್ತೇನೆ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-*58(ಡಿ)* ಎಂದು ಗುರುತಿಸಿದೆ. ಆರೋಪಿತ ನನ್ನ ಹತ್ತಿರ ಸಂಬಂಧಿಯಿರುತ್ತಾನೆ ಎಂದರೆ ನಿಜ. ಅದೇ ಕಾರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದಃ- ಇಲ್ಲ**

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು